ಒ. ಎಸ್‌ಃ 57/2017
ಡಿ.ಡಬ್ಲ್ಯೂಃ02

<u>ದಿಃ 16.03.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲುಃ ಶ್ರೀ ಎನ್.ಎಸ್.ಎ ವಕೀಲರಿಂದ</u>

ನನ್ನ ತಂದೆಯ ಹೆಸರು ಗಂಗಪ್ಪ ಆಗಿರುತ್ತದೆ, ನನ್ನ ತಾಯಿಯ ಹೆಸರು ಗಂಗಮ್ಮ ಆಗಿರುತ್ತದೆ, ನನ್ನ ತಂದೆಯ ತಾಯಿ ಅಂದರೆ ನನ್ನ ಅಜ್ಜಿಯ ಹೆಸರು ತಿಮ್ಮಕ್ಕ ಆಗಿರುತ್ತದೆ. ನನ್ನ ತಂದೆ ಗಂಗಪ್ಪನವರಿಗೆ ನನ್ನನ್ನು ಸೇರಿಸಿಕೊಂಡು 8 ಜನ ಮಕ್ಕಳು. ನನ್ನ ತಂದೆಗೆ ಮೊದಲನೇ ಸಂತತಿ ಗಂಗಪ್ಪ ಆಗಿರುತ್ತಾರೆ, ಎರಡನೇ ಸಂತತಿ ಗಂಗಮ್ಮ ಆಗಿರುತ್ತಾರೆ, ಮೂರನೆಯವನು ನಾನು, ನಾಲ್ಕನೆಯವರು ನರಸಿಂಹಪ್ಪ, ಐದನೇಯವರು ನಂಜಪ್ಪ, ಆರನೆಯವರು ಈರಪ್ಪ, ಏಳನೇಯವರು ಲಕ್ಷ್ಮೀದೇವಮ್ಮ ಹಾಗೂ ಎಂಟನೆಯವರು ತಿಮ್ಮಯ್ಯ ಆಗಿರುತ್ತಾರೆ.

2) ಈಗ ನನಗೆ 86 ವರ್ಷ ವಯಸ್ಸಾಗಿರುತ್ತದೆ. ನನ್ನ ಅಣ್ಣ ಗಂಗಪ್ಪ ವಿಕಲಚೇತನರು ಎಂದರೆ ಸರಿ. ನನ್ನ ತಂದೆಯವರು ಬದುಕಿದ್ದಾಗ ನಮ್ಮ ಕುಟುಂಬದ ವ್ಯವಹಾರವನ್ನು ಅವರೇ ನೋಡಿಕೊಳ್ಳುತ್ತಿದ್ದರು. ನನ್ನ ತಂದೆ ಮರಣ ನಂತರ ನನ್ನ ಅಣ್ಣ ವಿಕಲಚೇತನರಾಗಿದ್ದರಿಂದ ನಾನು ಮನೆಯ ವ್ಯವಹಾರ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಅಣ್ಣ ಮತ್ತು ನಾನು ಇಬ್ಬರು ಸೇರಿಕೊಂಡೆ ವ್ಯವಹಾರ ಮಾಡುತ್ತಿದ್ದೆ ಎನ್ನುತ್ತಾರೆ. ನನ್ನ ಸಹೋದರಿಯರ ಮದುವೆಯನ್ನು ನಾನು ಮಾಡಿರುತ್ತೇನೆ. ನನ್ನ ತಂದೆಯು ಜೀವಂತವಾಗಿದ್ದಾಗ ಒಟ್ಟು ಕುಟುಂಬದ ಆಸ್ತಿಯನ್ನು ಅವರು ನಮ್ಮ 8 ಜನಕ್ಕೆ ವಿಭಾಗ

ಮಾಡಿಕೊಟ್ಟಿರುವುದಿಲ್ಲ. ನನ್ನ ತಂದೆಯ ತಂದೆ ಅಂದರೆ ನನ್ನ ತಾತನದು ಮೂಲತಃ ಕಾಮರೆಡ್ಡಿಹಳ್ಳಿ ಗ್ರಾಮದವರು ಎಂದರೆ ಸರಿ.

3) ನನ್ನ ತಾತ ಬಿಕ್ಕಲಹಳ್ಳಿ ಗ್ರಾಮದ ಮಜರಾ ಗುಯ್ಯಲಹಳ್ಳಿ ಗ್ರಾಮದ ತಿಮ್ಮಕ್ಕನನ್ನು ಮದುವೆಯಾಗಿದ್ದರು ಎಂದರೆ ಸರಿ. ನನ್ನ ಅಜ್ಜಿ ತಿಮ್ಮಕ್ಕನ ತಂದೆಗೆ ಗಂಡು ಸಂತತಿ ಇರಲಿಲ್ಲ ಎಂದರೆ ಸರಿ. ನನ್ನ ತಾತ ಆತನ ಆಸ್ತಿಯನ್ನು ಬಿಟ್ಟು ತನ್ನ ಹೆಂಡತಿಯ ಮನೆಗೆ ಹೋಗಿ ವಾಸ ಮಾಡಿಕೊಂಡಿದ್ದರು. ನನ್ನ ಅಜ್ಜಿಯ ತಂದೆಯ ಹೆಸರು ಕರಿ ತಿಮ್ಮಯ್ಯ ಆಗಿದ್ದು, ಸದರಿ ಕರಿ ತಿಮ್ಮಯ್ಯನವರು ಮೃತ ಹೊಂದಿದ ನಂತರ ಆತನ ಎಲ್ಲಾ ಆಸ್ತಿ ನನ್ನ ಅಜ್ಜಿ ತಿಮ್ಮಕ್ಕನಿಗೆ ಬಂದಿದ್ದು ಸದರಿ ಆಸ್ತಿಯನ್ನು ನನ್ನ ತಾತ ಗಂಗಪ್ಪನು ನೋಡಿಕೊಳ್ಳುತ್ತಿದ್ದ ಎಂದರೆ ಸರಿ. ಸದರಿ ನನ್ನ ಅಜ್ಜಿ ತಿಮ್ಮಕ್ಕ ಮೃತ ಹೊಂದಿದ ನಂತರ ಆಕೆಯ ಆಸ್ತಿ ಎಲ್ಲವೂ ನನ್ನ ತಂದೆಗೆ ಗಂಗಪ್ಪನಿಗೆ ಬಂದಿರುತ್ತದೆ ಎಂದರೆ ಸರಿ.

4) ಈ ದಾವೆಯಲ್ಲಿ ಹೂಡಿರುವ ಗುಯ್ಯಲಹಳ್ಳಿ ಗ್ರಾಮದ ಆಸ್ತಿಗಳು ಎಲ್ಲವೂ ಸದರಿ ತಿಮ್ಮಕ್ಕನ ಆಸ್ತಿಗಳು ಎಂದರೆ ಸರಿ. ತಿಮ್ಮಕ್ಕನು ಜೀವಿತಾವಧಿಯಲ್ಲಿ ಯಾವುದೇ ರೀತಿಯಾದ ಮರಣ ಶಾಸನ ಪತ್ರವನ್ನು ಬರೆದಿರಲಿಲ್ಲ. ನನ್ನ ತಂದೆ ಮೃತ ಹೊಂದಿದ ನಂತರ ಸದರಿ ಎಲ್ಲಾ ಆಸ್ತಿಗಳು ನನ್ನ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ ಸರಿ. ನನ್ನ ಅಕ್ಕ ಗಂಗಮ್ಮ 1982ನೇ ಸಾಲಿನಲ್ಲಿ ಮೃತ ಹೊಂದಿದ್ದರು ಎಂದರೆ ಸರಿ. ಬಿಕ್ಕಲ್ಲಹಳ್ಳಿ ಗ್ರಾಮದ ಸ.ನಂ.105/2 ರಲ್ಲಿ ಆಕೆಯನ್ನು ಮಣ್ಣು ಮಾಡಿದ್ದು ಅಲ್ಲಿಯೇ ನಮ್ಮ ಕುಟುಂಬದ ಹಿರಿಕರರಾದ ತಂದೆ-ತಾಯಿ, ಅಜ್ಜಿ ತಿಮ್ಮಕ್ಕ, ಎಲ್ಲರನ್ನು ಅಲ್ಲಿಯೇ ಮಣ್ಣು ಮಾಡಿರುವುದು.

5) ನನ್ನ ತಂದೆಯು ಜೀವಿತಾವಧಿಯಲ್ಲಿ ಮುಕ್ಕಡಗಟ್ಟ ಗ್ರಾಮದಲ್ಲಿ ಅನೇಕ ಆಸ್ತಿಗಳನ್ನು ಸಂಪಾದಿಸಿದ್ದರು ಎಂದರೆ ಸರಿ. ಈ ಆಸ್ತಿಗಳು ನನ್ನ ತಂದೆಯ ಮರಣ ನಂತರ ನನ್ನ ಹೆಸರಿಗೆ ಖಾತೆಯಾಗಿರುತ್ತದೆ ಸರಿ. ನಮ್ಮ ಕುಟುಂಬದ ಎಲ್ಲಾ ಆಸ್ತಿಗಳನ್ನು ಈ ದಾವೆಯಲ್ಲಿ ವಾದಿಗಳು ಸೇರಿಸಿರುತ್ತಾರೆ. ಈ ಆಸ್ತಿಗಳನ್ನು ಬಿಟ್ಟು ನನ್ನ ತಾತನಿಗೆ ಸೇರಿದ ಇನ್ನೂ ಅನೇಕ ಆಸ್ತಿಗಳು ಇರುತ್ತದೆ. ಸದರಿ ಆಸ್ತಿಗಳ ಸ.ನಂ.ಗಳನ್ನು ನನಗೆ ಈಗ ಹೇಳಲು ಬರುವುದಿಲ್ಲ. ನನ್ನ ತಂದೆಯು ಕಾಮರೆಡ್ಡಿ ಹಳ್ಳಿ ಗ್ರಾಮದಲ್ಲಿ ಇದ್ದ ಎಲ್ಲಾ ಆಸ್ತಿಗಳನ್ನು ಅವರ ಅಣ್ಣ ತಮ್ಮಂದಿರಿಗೆ ಬಿಟ್ಟು ಬಂದಿರುತ್ತಾರೆ ಎಂದರೆ ಸರಿಯಲ್ಲ.

6) ನ್ಯಾಯ ಪಂಚಾಯಿತಿ ಆಗಿದ್ದು, ಆಗ ನಾವುಗಳು ನಮ್ಮ ತಂದೆಯ ಕಾಮರೆಡ್ಡಿ ಹಳ್ಳಿ ಗ್ರಾಮದ ಆಸ್ತಿ ಕೊಡುವಂತೆ ಕೇಳಿದ್ದೆವು, ಮೊದಲಿಗೆ ಕೊಡುವುದಿಲ್ಲ ಎಂದು ಹೇಳಿದ್ದರು ನಂತರ ಅವರೇ ಬಂದು ಆಸ್ತಿ ಕೊಡುತ್ತೇವೆ ಎಂದು ಹೇಳಿರುತ್ತಾರೆ ಆದರೆ ನಾವು ಇನ್ನೂ ತೆಗೆದುಕೊಂಡಿರುವುದಿಲ್ಲ ಹಾಗೂ ಹೋಗಿರುವುದಿಲ್ಲ. ಸದರಿ ನ್ಯಾಯ ಪಂಚಾಯಿತಿಯ ಬಗ್ಗೆ ಮತ್ತು ಈಗ ಹೇಳಿದ ವಿಚಾರದ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ. ನನ್ನ ತಂದೆಯೇ ಕಾಮರೆಡ್ಡಿ ಹಳ್ಳಿ ಗ್ರಾಮದ ಆಸ್ತಿಗಳನ್ನು ಎಲ್ಲಾ ಬಿಟ್ಟಿರುವುದರಿಂದ ನಾವು ಇಲ್ಲಿಯವರೆಗೂ ಹೋಗಿ ಕೇಳಿರುವುದಿಲ್ಲ ಎಂದರೆ ಸರಿಯಲ್ಲ.

7) ನಾನು ಇಲ್ಲಿಯವರೆಗೂ ನನ್ನ ಸಹೋದರ ಸಹೋದರಿಯರ ಜೊತೆ ನನ್ನ ತಂದೆ ಕಡೆಯಿಂದ ಬಂದಿರುವ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುವುದಿಲ್ಲ. ನನ್ನ ತಂದೆಯು ನನಗೆ ಎಲ್ಲಾ ಆಸ್ತಿಗಳನ್ನು ವಿಲ್ ಮೂಲಕ ಮಾಡಿಕೊಟ್ಟಿರುತ್ತಾರೆ. ಆದ ಕಾರಣ ಬೇರೆ

ಯಾರಿಗೂ ಆ ಆಸ್ತಿಗಳಲ್ಲಿ ಹಕ್ಕು ಇರುವುದಿಲ್ಲ. ನನ್ನ ತಂದೆಯು ಯಾವುದೇ ರೀತಿಯಾದ ವಿಲ್ಲನ್ನು ಬರೆದುಕೊಟ್ಟಿರುವುದಿಲ್ಲ ನಾನು ಬೇರೆಯವರಿಗೆ ಭಾಗ ಕೊಡಬೇಕು ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

8) ನಾನು ಮದುವೆ ಮಾಡುವ ಉದ್ದೇಶಗಳಿಂದ ಆಸ್ತಿಗಳ ಮೇಲೆ ಸಾಲ ಮಾಡಿರುತ್ತೇನೆ. ನಾನು ನನ್ನ ಮನೆಯ ಯಜಮಾನರಾಗಿರುವುದರಿಂದ ಸಾಲ ಮಾಡಿರುವುದು ಎಂದರೆ ಸರಿ. ನಾನು ಸಾಲ ಮಾಡಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರು ಮಾಡಿರುತ್ತೇನೆ. ಆದರೆ ಬೇರೆ ಸಾಕ್ಷಿದಾರರ ಸಾಕ್ಷ್ಯ ಮಾಡಿಸಿರುವುದಿಲ್ಲ. ನಾನು ಸಲ್ಲಿಸಿರುವ ಮುಖ್ಯ ವಿಚಾರಣೆಯ ಅಂಶಗಳು ಎಲ್ಲ ಸತ್ಯದಿಂದ ಕೂಡಿದ್ದು ಯಾವುದು ತಪ್ಪಾಗಿ ಬರೆಸಿರುವುದಿಲ್ಲ. ಎಲ್ಲರಿಗೂ ದಾವಾ ಅನುಸೂಚಿ ಸ್ವತ್ತುಗಳಲ್ಲಿ ಭಾಗ ಇರುತ್ತದೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಪ್ರತಿವಾದಿ 3, 5 ಮತ್ತು 8 ರಿಂದ 12 ರ ಪರವಾಗಿ ಶ್ರೀ ಡಿ.ಎನ್. ವಕೀಲರಿಂದ</u>

9) ತಿಮ್ಮಯ್ಯ ನನ್ನ ತಮ್ಮನಾಗಬೇಕು, ಆತ ಶಿಕ್ಷಕನಾಗಿದ್ದ, ಅವರು ಅವರ ಆದಾಯದಿಂದ ಸುಮಂಗಲಿ ಬಡಾವಣೆಯಲ್ಲಿ ಮನೆಯೊಂದನ್ನು ಸ್ವಂತಕ್ಕೆ ಕಟ್ಟಿರುತ್ತಾರೆ ಎಂದರೆ ಸರಿ. ಸದರಿ ಆ ಆಸ್ತಿಯಲ್ಲಿ ನಮಗೆ ಹಕ್ಕಿಲ್ಲ ಎಂದರೆ ಸಾಕ್ಷಿಯು ಮನೆ ಕಟ್ಟಲು ಹಾಗೂ ಮೋಲ್ಡ್ ಹಾಕಲು ಇತರ ಕಾರ್ಯಗಳಿಗೆ ನಾನು ಹಣವನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಮನೆ ಕಟ್ಟಲು ತಮ್ಮ ಆದಾಯದಿಂದ ಸಾಲ ಮಾಡಿ

ತೀರಿಸಲು ಸಾಲ ಪಡೆದಿದ್ದರು ಎಂದರೆ ಸರಿಯಲ್ಲ. ಸದರಿ ಅವರ ಸಂಬಳದಿಂದ ಇಎಂಐ ಹೋಗಿರುತ್ತದೆ ಎಂದರೆ ಸರಿಯಲ್ಲ.

10) ನೀಲಗಿರಿ ತೋಪನ್ನು ಮಾರಾಟ ಮಾಡಿ ಬಂದ ಆದಾಯದಿಂದ ಮನೆ ಕಟ್ಟಿಸಿಕೊಟ್ಟಿರುತ್ತೇನೆ. ಮನೆ ಕಟ್ಟಲು ನಮ್ಮದೇ ಇಟ್ಟಿಗೆ ಕಾರ್ಖಾನೆಯಿಂದ ತಯಾರು ಮಾಡಿ ಇಟ್ಟಿಗೆಯನ್ನು ಕೊಟ್ಟಿರುತ್ತೇವೆ ಹಾಗೂ ಹಿರೇಬಿದನೂರಿನಿಂದ ಮರಳನ್ನು ಕೂಡ ತಂದು ಕೊಟ್ಟಿರುತ್ತೇನೆ, ಜಲ್ಲಿ ಕಲ್ಲನ್ನು ಕೂಡ ನಾವೇ ತಂದು ಕೊಟ್ಟಿರುತ್ತೇವೆ. ಸಿಮೆಂಟ್, ಕಬ್ಬಿಣ ಮಾತ್ರ ಅವರೇ ತೆಗೆದುಕೊಂಡು ಬಂದಿರುತ್ತಾರೆ. ಸದರಿ ಮರಳು, ಇಟ್ಟಿಗೆ, ಜಲ್ಲಿ ಕಲ್ಲಿನ ಬಗ್ಗೆ ದಾಖಲೆ ಇರುವುದಿಲ್ಲ. ಐದನೇ ಪ್ರತಿವಾದಿಯು ಸ್ವಂತ ಹಣದಿಂದ ಕಟ್ಟಿರುವ ಮನೆಯಲ್ಲಿ ಭಾಗ ಪಡೆಯಬೇಕು ಎನ್ನುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-
ಹಿರಿಯ ಶ್ರೇಣಿ ನ್ಯಾಯಾಧೀಶರು
ಗೌರಿಬಿದನೂರು.